ಓ ಎಸ್ ನಂಬರ 12/2019
ಡಿ. ಡಬ್ಲ್ಯೂ -3

**ದಿನಾಂಕಃ 18.07.2025**
**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಎಂ ಎಂ ವಕೀಲರಿಂದಃ**

ನನಗೆ ನ್ಯಾಯಾಲಯದಿಂದ ಸಾಕ್ಷಿಯನ್ನು ನೀಡಲು ಸಮಸ್ಸ ಬಂದಿರುತ್ತದೆ. ನಾನು ಸಾಮಾನ್ಯ ಅಧಿಕಾರ ಪತ್ರವನ್ನು ಮಾಡಿಕೊಟ್ಟಿರುತ್ತೇನೆ ಅದಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯಲು ಸಮನ್ಸ ಬಂದಿರುತ್ತದೆ. ನಾನು ನ್ಯಾಯಾಲಯಕ್ಕೆ ನೇರವಾಗಿ ಮೌಖಿಕವಾಗಿ ಸಾಕ್ಷ್ಯವನ್ನು ನೀಡದೆ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರವನ್ನು ಪ್ರತಿವಾದಿ ಪರ ವಕೀಲರ ಮೂಲಕ ಹಾಕಿರುತ್ತೇನೆ. ನನಗೆ ನೇರವಾಗಿ ಸಾಕ್ಷ್ಯವನ್ನು ನುಡಿಯಲು ಯಾವುದೇ ತೊಂದರೆ ಇರುವುದಿಲ್ಲ.

2. ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಬರೆಯಲು ಮಾಹಿತಿಯನ್ನು ನಾನೇ ವಕೀಲರಿಗೆ ನೀಡಿರುತ್ತೇನೆ. ನಾನು ಬೆಳಗಾವಿಯಲ್ಲಿ ಹುಟ್ಟಿನಿಂದಲು ವಾಸವಿದ್ದೇನೆ. ನಾನು 1998 ರಿಂದ ನೋಟರಿಯರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನೋಟರಿಯಾಗಿ ನೇಮಕಾತಿಯಾದ ಬಳಿಕ, ಮೊದಲು ಎರಡು ಬಾರಿಗೆ 3ವರ್ಷಗಳಿಗೊಮ್ಮೆ ರಿನಿವಲ್ ಮಾಡಲಾಗುತ್ತದೆ ತದನಂತರ 5ವರ್ಷಗಳಿಗೊಮ್ಮೆ ಮಾಡಲಾಗುತ್ತದೆ.

3. ನಾನು ದಾವೆಗೆ ಸಂಬಂಧಿಸಿದ ಅಧಿಕಾರ ಪತ್ರವನ್ನು ಮಾಡುವ ಕಾಲಕ್ಕೆ ನನ್ನ ನೋಟರಿ ಲೈಸನ್ಸ ರಿನಿವಲ್ ಆಗಿರುತ್ತದೆ. ಸದರಿ ರಿನಿವಲ್ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿ ಮುಂದುವರೆದು ರಜಿಸ್ಟರನ್ನು ಹಾಜರುಪಡಿಸಿರುತ್ತೇನೆ. ಅಧಿಕಾರ ಪತ್ರವನ್ನು ಮಾಡುವ ಕಾಲಕ್ಕೆ ನಾನು ನೋಟರಿ ಪರವಾಣಿಗೆಯನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

4. ಅಧಿಕಾರ ಪತ್ರವನ್ನು ಮಾಡುವ ಕಾಲಕ್ಕೆ ಯಾರೆಲ್ಲಾ ಬಂದಿದ್ದರು ಎಂದು ಅವರ ಹೆಸರನ್ನು ಹೇಳಲಾಗುವುದಿಲ್ಲ. ಅಧಿಕಾರ ಪತ್ರವನ್ನು ಮಾಡುವ ಕಾಲಕ್ಕೆ 5 ಜನ, ಅಧಿಕಾರ ಪತ್ರವನ್ನು ಪಡೆದುಕೊಳ್ಳುವ ವ್ಯಕ್ತಿ ಹಾಗೂ ವಕೀಲರೊಬ್ಬರು ಬಂದಿದ್ದರು. ಅವರೆಲ್ಲರ ಹೆಸರನ್ನು ಅಧಿಕಾರ ಪತ್ರವನ್ನು ನೋಡದೇ ಹೇಳಲಾಗುವುದಿಲ್ಲ. ಅಧಿಕಾರ ಪತ್ರವನ್ನು ಪಡೆದುಕೊಂಡು ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ವ್ಯಕ್ತಿಯು ನನ್ನ ಸಾಕ್ಷಿ ವಿಚಾರಣೆಗೆ ಮೊದಲು ನನ್ನ ಬಳಿ ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಹೇಳಿದ ವ್ಯಕ್ತಿಗಳು ಹೊರತುಪಡಿಸಿ ಬೇರೆ ಯಾವುದೇ ವ್ಯಕ್ತಿ ಬಂದಿರುವುದಿಲ್ಲ.

5. 10 ಎಕರೆ 23 ಗುಂಟೆ 04 ಎಕರೆ 11 ಗುಂಟೆ ಗಳಿಗೆ ಸಂಬಂಧಿಸಿದ ಅಧಿಕಾರವನ್ನು 5 ಜನರಿಂದ ಅಡಿವೆಪ್ಪ ರವರಿಗೆ ಮಾಡಿಕೊಟ್ಟಿರುತ್ತೇನೆ. ಸದರಿ 5 ಜನರ ಹೆಸರುಗಳನ್ನು ನನಗೆ ಹೇಳಲಾಗುವುದಿಲ್ಲ. ಸದರಿ ಅಧಿಕಾರ ಪತ್ರದ ಮೂಲಕ ಯಾವೆಲ್ಲ ಅಧಿಕಾರವನ್ನು ಅಡಿವೆಪ್ಪ ರವರಿಗೆ ನೀಡಿರುತ್ತಾರೆ ಎಂದು ನನಗೆ ಪತ್ರವನ್ನು ನೋಡದೆ ಹೇಳಲಾಗುವುದಿಲ್ಲ. ಅಧಿಕಾರ ಪತ್ರವನ್ನು ಸಂಪೂರ್ಣವಾಗಿ ಓದಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಅಧಿಕಾರಪತ್ರವನ್ನು ಪಕ್ಷಗಾರರೇ ಆಂಗ್ಲ ಭಾಷೆಯಲ್ಲಿ ತಯಾರಿಸಿಕೊಂಡು ಬಂದಿದ್ದರು.

6. ಅಧಿಕಾರಪತ್ರದಲ್ಲಿ, ಆಸ್ತಿಯನ್ನು ಮಾರಾಟ ಮಾಡಲು ಅಧಿಕಾರವನ್ನು ನೀಡಲಾಗಿರುತ್ತದೆ. ಸದರಿ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ನೋಟರಿ ಮಾಡಲು ಅಧಿಕಾರ ಇತ್ತು. ಮಾರಾಟಕ್ಕೆ ಸಂಬಂಧಿಸಿದ ನೋಟರಿಯನ್ನು ಮಾಡಲು ನನಗೆ ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ನ್ಯಾಯಾಲಯದ ಎಲ್ಲ ಪ್ರಕ್ರಿಯೆಗಳಲ್ಲಿ ಹಾಜರಾಗಲು ಅಧಿಕಾರವನ್ನು ನೀಡಲಾಗಿರುತ್ತದೆ.

7. ಅಧಿಕಾರಪತ್ರದಲ್ಲಿ ಮೊದಲನೇ ಖಂಡಿಕೆಯಾದ, ಮಾರಾಟ ಮಾಡುವ ಅಧಿಕಾರದ ಬಗ್ಗೆ ಮಾಹಿತಿಯನ್ನು ವಾದಿಯರಿಂದ ಮುಚ್ಚಿಟ್ಟು ಅಧಿಕಾರ ಪತ್ರಕ್ಕೆ ಮೊಸದಿಂದ ಅವರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಹೆಸರು, ತೆಗೆದುಕೊಳ್ಳುವವರ ಹಾಗೂ ಪಡೆದುಕೊಳ್ಳುವವರ ಹೆಸರು, ಉದ್ದೇಶವನ್ನು ನಮ್ಮ ವಹಿಯಲ್ಲಿ ನಮೂದಿಸಿಕೊಳ್ಳುತ್ತೇವೆ. ಅಧಿಕಾರ ಪತ್ರವನ್ನು ಮಾಡಿಕೊಳ್ಳುವ ಕಾಲಕ್ಕೆ ಅಧಿಕಾರ ಪತ್ರದ ಮೇಲೆ ಪೋಟೋವನ್ನು ಅಂಟಿಸಿಕೊಂಡಿರುತ್ತೇವೆ. ವಹಿಯ ಮೇಲೆ ಪೋಟೋವನ್ನು ಪಡೆದುಕೊಂಡಿರುವುದಿಲ್ಲ. ಆ ಕಾಲಕ್ಕೆ ವಹಿಯ ಮೇಲೆ ಪೋಟೊವನ್ನು ಪಡೆದುಕೊಳ್ಳಬೇಕೆಂಬ ನಿಯಮ ಇರಲಿಲ್ಲ. ನಿಶಾನೆ ಡಿ 4ಎ ರಲ್ಲಿ ಉದ್ದೇಶವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಾನು ಪ್ರತಿವಾದಿಗಳೊಂದಿಗೆ ಮಿಲಾಪಿಯಾಗಿ ಅಧಿಕಾರಪತ್ರದಲ್ಲಿ ಮೊದಲನೇ ಖಂಡಿಕೆಯನ್ನು ಬರೆದಿರುತ್ತೇನೆ ಎಂದರೆ ಸರಿಯಲ್ಲ.

8. ಅಧಿಕಾರಪತ್ರವನ್ನು ಪಡೆದುಕೊಂಡವರ ಹಾಗೂ ಮಾಡಿಕೊಟ್ಟವರ ಖುದ್ದು ಮಾಹಿತಿ ನನಗೆ ಇಲ್ಲ. ಅವರಿಗೆ ಆಂಗ್ಲ ಭಾಷೆ ಬರುತ್ತದೆ ಇಲ್ಲವೋ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಕನ್ನಡದಲ್ಲಿ ಅವರಿಗೆ ಓದಿ ತಿಳಿಸಿರುತ್ತೇನೆ. ಅಧಿಕಾರಪತ್ರವನ್ನು ಮಾಡುವ ಕಾಲಕ್ಕೆ ಕಿತ್ತೂರು ನ್ಯಾಯಾಲಯ ಆಗಿರುವುದಿಲ್ಲ. 2011ರಲ್ಲಿ ನೋಟರಿಗಳು ಇದ್ದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಬೈಲಹೊಂಗಲದಲ್ಲಿ ನೊಟರಿಗಳು ಇದ್ದರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ವಾದಿಯರದು ಪ್ರಕರಣವು

ಬೈಲಹೊಂಗಲ ಮತ್ತು ಕಿತ್ತೂರು ನ್ಯಾಯಾಲಯದಲ್ಲಿ ಇದ್ದವು ಎಂದರೆ ಗೊತ್ತಿಲ್ಲ. ಅಡಿವೆಪ್ಪ ರವರು 2 ನೇ ವಾದಿ ಬಾಳವ್ವ ರವರ ಖಾಸ ಸಹೋದರ ಎಂದರೆ ನನಗೆ ಗೊತ್ತಿಲ್ಲ. ಅಧಿಕಾರ ಪತ್ರವನ್ನು ಮಾಡಕೊಡುವ ಕಾಲಕ್ಕೆ ದಾವಾ ಆಸ್ತಿ ಯಾರೆಲ್ಲ ಹೆಸರಲ್ಲಿ ಇತ್ತು ಎಂದು ನಾನು ನೋಡಿರುವುದಿಲ್ಲ. ಸದರಿ ಆಸ್ತಿಯಲ್ಲಿ ಸಹ ಜಂಟಿಯಾಗಿ ಸಿದ್ದವ್ವ ನೀಲಪ್ಪ ನಿಚ್ಚಣಿಕೆ ಎಂಬುವವರ ಹೆಸರು ಉತಾರದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಹಾಗೂ ಸಿದ್ದವ ರವರ ಪ್ರಕರಣವು ತಹಶೀಲ್ದಾರ ಕಚೇರಿಯಲ್ಲಿ ಬಾಕಿ ಇದ್ದವು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲ ಪ್ರಕರಣಗಳನ್ನು ನಡೆಸಲು ಅಡಿವೆಪ್ಪ ರವರಿಗೆ ಅಧಿಕಾರ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಪ್ರಕರಣದಲ್ಲಿಯು ಸಹ ಅವರು ನಡೆಸಬೇಕೆಂದು ಅಧಿಕಾರ ಪತ್ರವನ್ನು ಮಾಡಿಕೊಡುವ ಕಾಲಕ್ಕೆ ಮೊಸದಿಂದ ಮಾರಾಟಕ್ಕೆ ಸಂಬಂಧಿಸಿದ ಖಂಡಿಕೆಯನ್ನು ನಾನು ಪ್ರತಿವಾದಿಯರೊಂದಿಗೆ ಮಿಲಾಪಿಯಾಗಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

9. ಅಧಿಕಾರಪತ್ರದ ಸಾಕ್ಷಿದಾರರಾದ ಸಂಗನಗೌಡ ಪಕೀರಗೌಡ ಪಾಟೀಲ ರವರು ನನ್ನ ಸಮಕ್ಷಮ ಬಂದು ಸಹಿ ಮಾಡಿರುವುದಿಲ್ಲ. ಸಾಕ್ಷಿದಾರರು ಮೊದಲೇ ಸಹಿಯನ್ನು ಮಾಡಿ ಪತ್ರವನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಸಾಕ್ಷಿದಾರರ ಸಹಿಯನ್ನು ನನ್ನ ಮುಂದೆ ಪಡೆದುಕೊಂಡಿರುತ್ತೇನೆ ಎಂದು ತಿಳಿಸಿರುವುದಿಲ್ಲ. ನಾನು ಪ್ರತಿವಾದಿ, ಸಿ ಆರ್ ನಾಯಕ ವಕೀಲರು ಮಿಲಾಪಿಯಾಗಿ ವಾದಿಯರ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಆಂಗ್ಲ ಭಾಷೆಯಲ್ಲಿ ತಯಾರಿಸಿ ವಾದಿಯರ ಸಹಿಯನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಖರೀದಿ ಖಂಡಿಕೆಗೆ ವಾದಿಯರು ಎಂದು ಒಪ್ಪಿ ಕೊಂಡು, ಹಾಗೂ ಅಧಿಕಾರ ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ. ದಂ. ನ್ಯಾ. ಬೈಲಹೊಂಗಲ